ಕಥೆ



ಹಿಂದಿ ಮೂಲ: **ಶಂಕರ ಪುಣ್ತಾಂಬೇಕರ್**
ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಸಂತೋಷ್ ಸಸಿಹಿತ್ಲು



# ಚಿತ್ರ

ಅವನು ಚಿತ್ರವನ್ನು ಬರೆಯುತ್ತಿದ್ದ. ಎದುರಿಗಿದ್ದ ಸ್ಟ್ಯಾಂಡಿನ ಮೇಲೆ ಹಲಗೆಯಿತ್ತು. ಕೈಯಲ್ಲಿ ಬ್ರಶ್ ಇತ್ತು. ಕೆಳಗೆ ಬಣ್ಣಗಳು ಹರಡಿದ್ದವು. ಅವನು ಚಿತ್ರವನ್ನಂತೂ ಬರೆಯುತ್ತಿದ್ದ, ಆದರೆ ಯಾವ ಚಿತ್ರ ಬರೆಯಲು ಕುಳಿತಿದ್ದನೋ, ಅವನಿಗೇ ತಿಳಿದಿರಲಿಲ್ಲ! ಅವನ ಕಣ್ಣುಗಳೆದುರು ಮಸುಕು-ಮಸುಕು. ಮಸುಕಿನಲ್ಲಿ ಚಿತ್ರವನ್ನು ಹುಡುಕಲು ಪ್ರಯತ್ನಿಸುತ್ತಿದ್ದ.

ಬಾಗಿಲನ್ನು ತಟ್ಟದ ಸದ್ದು. ಅವನು ಎದ್ದು ಬಾಗಿಲು ತೆರೆದ.

ಬಾಗಿಲು ತೆರೆದಾಗ ಎದುರಿಗೆ ನೋಡುತ್ತಾನೆ: ರಷ್ಯಾದ ಅಧ್ಯಕ್ಷರಾದ ಮಿಖಾಯಿಲ್ ಗೋರ್ಬಾಚೇವ್ ನಿಂತಿದ್ದಾರೆ!

'ಬನ್ನಿ, ಬನ್ನಿ!' ಅವನು ಅವರನ್ನು ಸ್ವಾಗತಿಸುತ್ತಾನೆ, ಅವರನ್ನು ಒಳಗೆ ಕರೆತರುತ್ತಾನೆ.

ಹಲಗೆ ಎದುರು ಒಂದು ಕುರ್ಚಿ ಇತ್ತು, ಅಲ್ಲಿ ಅವನು ಗೋರ್ಬಾಚೇವರನ್ನು ಕೂರಿಸುತ್ತಾನೆ.

'ಕ್ಷಮಿಸಿ, ನಾನು ನಿಮಗೆ ಡಿಸ್ಟರ್ಬ್ ಮಾಡಿದೆ. ನೀವು ಕೆಲಸ ಮಾಡುತ್ತಿದ್ದೀರಾ' ಗೋರ್ಬಾಚೇವ್ ಹೇಳಿದರು.

'ಇಲ್ಲ, ಇಲ್ಲ. ನೀವು ಡಿಸ್ಟರ್ಬ್ ಮಾಡಲಿಲ್ಲ' ಚಿತ್ರಕಾರ ಹೇಳಿದ, 'ನಾನು ಅವಶ್ಯವಾಗಿ ಕೆಲಸ ಮಾಡುತ್ತಿದ್ದೆ. ನನ್ನ ಕೈಯಲ್ಲಿ ಬ್ರಶ್ ಅಂತೂ ಇತ್ತು, ಆದರೆ ಕಣ್ಣುಗಳಲ್ಲಿ ದೃಷ್ಟಿ ಇರಲಿಲ್ಲ. ಬ್ರಶ್‌ನಿಂದ ಏನು ಮೂಡುತ್ತಿತ್ತೋ ಗೊತ್ತಿಲ್ಲ.'

'ನನ್ನದೊಂದು ಕೆಲಸ ಮಾಡ್ತೀರಾ? ನನಗೊಂದು ಚಿತ್ರ ಬರೆದು ಕೊಡಿ. ಪಾರಿವಾಳದ ಚಿತ್ರ.'

'ಪಾರಿವಾಳದ ಚಿತ್ರ!'

'ಹೌದು' ಗೋರ್ಬಾಚೇವ್ ಹೇಳಿದರು, 'ನಾವು ಇದುವರೆಗೆ ಪಾರಿವಾಳದ ತಪ್ಪು ಚಿತ್ರಗಳನ್ನು ಬರೆಸಿದೆವು. ನಾವು ಅಂದರೆ ರಷ್ಯಾ, ಅಮೆರಿಕ... ನಾವಂತೂ ಪಾರಿವಾಳದ ಚಿತ್ರಗಳನ್ನೇ ಬರೆಸಿದೆವು. ಆದರೆ ಅದರೊಳಗಿಟ್ಟ ಶಸ್ತ್ರ... ಅಣುಶಸ್ತ್ರ, ಮೇಲು ನೋಟಕ್ಕೆ ಪಾರಿವಾಳ, ಒಳಗಿನಿಂದ ಹದ್ದು. ಇಂಥ ಚಿತ್ರವನ್ನೇಕೆ ಬರೆಸಿದೆವು? ಏಕೆಂದರೆ ನಾವು ಮೇಲು ನೋಟಕ್ಕೆ ಪಾರಿವಾಳ, ಆದರೆ ಒಳಗಿನಿಂದ ಹದ್ದುಗಳಾಗಿದ್ದೆವು.'

'ನೀವೇನು ತಗೊಳ್ತೀರ? ಚಹಾ ಅಥವಾ ಕಾಫಿ? ವೋಡ್ಕಾ ನನ್ನಲ್ಲಿಲ್ಲ.'

ಗೋರ್ಬಾಚೇವ್ ನಕ್ಕರು, 'ನಿಮಗೆ ಕುಡಿಸಬೇಕು ಅಂತ ಅನ್ನಿಸಿದ್ದನ್ನು ಕೊಡಿ. ಸೂಕ್ತ ಪಾರಿವಾಳದ ಚಿತ್ರದೊಂದಿಗೆ ನೀವು ವಿಷವನ್ನು ಕುಡಿಸಿದರೂ, ನಾನು ಕುಡಿಯುತ್ತೇನೆ.'

ಚಿತ್ರಕಾರ ಗೋರ್ಬಾಚೇವರಿಗೆ ಪಾರಿವಾಳದ ಚಿತ್ರವನ್ನು ಬರೆದು ಕೊಟ್ಟ.

ಗೋರ್ಬಾಚೇವ್ ತುಂಬಾ ಖುಷಿಯಿಂದ ಅಲ್ಲಿಂದ ಹೊರಟು ಹೋದರು.

ಅವನು ಚಿತ್ರವನ್ನು ಬರೆಯುತ್ತಿದ್ದ.